ಅಸಲ ದಾವಾ ನಂ.**358/2011**

ಡಿಡಬ್ಲೂ-**02**

ದಿನಾಂಕ**: 21-07-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ.ಎಮ್.ಹೆಚ್.ಕೆ. ವಕೀಲರಿಂದ**

1) ನಿಡಿ-14 ಮೃತ್ಯು ಪತ್ರವನ್ನು ಯಾರು ಯಾರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಯಾಸೀನ್ ಖಾನ್ ರವರು ನನಗೆ ಮಾಡಿಕೊಟ್ಟಿರುತ್ತಾರೆ. ಯಾಸೀನ್ ಖಾನ್ ನನಗೆ ದೊಡ್ಡಪ್ಪನಾಗಬೇಕು. ಹುಸೇನಬಿ ರಾಜಬಿ ಮುಲ್ಲಾ ಇವರಿಗೆ ಖಾತುನಬಿ ಒಬ್ಬ ಮಗಳು ಇದ್ದಾಳೆ ಎಂದರೆ ಸರಿಯಲ್ಲ. ನಿಡಿ-77 ಮೃತ್ಯು ಪತ್ರ 1935 ರಲ್ಲಿ ಯಾರು ಯಾರಿಗೆ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಹುಸೇನಬಿ ರವರು ಯಾಸೀನ್ ಖಾನ್ ಗೆ ಮಾಡಿಕೊಟ್ಟಿದ್ದಾರೆ. ಹುಸೇನಬಿ ಹೆಬ್ಬೆಟ್ಟು ಹಾಕುತ್ತಿದ್ದರು. ನಿಡಿ-77 ರಲ್ಲಿ ಹುಸೇನಮಾ ನನಗೆ ಒಬ್ಬಳೆ ಮಗಳು ಅವರು ಖಾತುನಬಿ ಗಂ. ಹುಸೇನಸಾಬ ದಫೇದಾರ ಇದ್ದಾರೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ತಪ್ಪಾಗಿ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ಹುಸೇನಮಾಗೆ ಖಾತುನಬಿ ಎಂಬ ಮಗಳು ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಯಾವ ತರಹ ಮಕ್ಕಳು ಇಲ್ಲ ಎಂದು ಉತ್ತರಿಸುತ್ತಾರೆ. ನಿಡಿ-77 ರಲ್ಲಿ ಯಾಸೀನ್ ಖಾನ್ ಸಂರಕ್ಷಣೆ ಮಾಡುತ್ತಿದ್ದಾನೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ತಪ್ಪಾಗಿ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-

77 ಮೃತ್ಯು ಪತ್ರ ರದ್ದಾಗಿರುತ್ತದೆ, ಇದನ್ನು ಹುಸೇನಬಿ ರದ್ದು ಮಾಡಿದ್ದಾರೋ ಇಲ್ಲವೋ ಎಂದರೆ ಸಾಕ್ಷಿಯು ಹುಸೇನಬಿ ಮತ್ತು ರಾಜೇಸಾಬ ಮುಲ್ಲಾ ರದ್ದು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಡಿ-77 ರದ್ದಾಗಿದ್ದರಿಂದ, ಯಾಸೀನ್ ಖಾನ್ ನಿಗೆ ಯಾವುದೇ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಉಂಟಾಗಿಲ್ಲ ಎಂದರೆ ಸಾಕ್ಷಿಯು ಯಾರಿಗೂ ಹಕ್ಕು ಉಂಟಾಗಿಲ್ಲ ಎಂದು ಉತ್ತರಿಸುತ್ತಾರೆ. ಹುಸೇನಬಿ ಮೃತ್ಯು ಪತ್ರವನ್ನೇ ಮಾಡಿಲ್ಲ, ಅದು ಖೊಟ್ಟಿಯಾಗಿದೆ ಎಂದರೆ ಸಾಕ್ಷಿಯು ಮೃತ್ಯು ಪತ್ರ ಮಾಡಿದ್ದಾರೆ, ಅದು ರದ್ದು ಆಯಿತು, ಇನ್ನೊಂದು ಮೃತ್ಯು ಪತ್ರ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಹುಸೇನಬಿಗೆ ಖಾತುನಬಿ ಎಂಬ ಮಗಳು ಇದ್ದುದರಿಂದ, ತಮ್ಮ ಆಸ್ತಿಯ ಬಗ್ಗೆ ಮೃತ್ಯು ಪತ್ರ ಮಾಡುವ ಪ್ರಮೆಯೇ ಉಂಟಾಗುವುದಿಲ್ಲ ಎಂದರೆ ಸಾಕ್ಷಿಯು ಅದು ಕ್ಯಾನ್ಸಲ್ ಆಗಿದೆ ಎಂದು ಉತ್ತರಿಸುತ್ತಾರೆ. ಮೃತ್ಯು ಪತ್ರ ರದ್ದಾಗಿದ್ದರಿಂದ, ಹುಸೇನಬಿ ತೀರಿಕೊಂಡಿದ್ದರಿಂದ, ಆಕೆಯ ಮಗಳಾದ ಖಾತುನಬಿ ನೇರ ವಾರಸುದಾರಳು ಆಗುತ್ತಾಳೆ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ಮೃತ್ಯು ಪತ್ರದ ಪ್ರಕಾರ ಯಾಸೀನ್ ಖಾನ್ ನಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು, ಕಬ್ಜಾ, ಮಾಲ್ಕಿ ಬಂದಿಲ್ಲ ಎಂದರೆ ಸಾಕ್ಷಿಯು ಈ ಮೃತ್ಯು ಪತ್ರವನ್ನು ರದ್ದು ಮಾಡಿ ಇನ್ನೊಂದು ಮೃತ್ಯು ಪತ್ರವನ್ನು ಹುಸೇನಬಿ

ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ವಿಲ್ ಅನ್ನು ಯಾವಾಗ ಮಾಡಿರುತ್ತಾರೆ ಎಂದರೆ ಸಾಕ್ಷಿಯು 1940 ರಲ್ಲಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ವಿಲ್ ಅನ್ನು ಹಾಜರುಪಡಿಸಿರುತ್ತೇನೆ. ಯಾಸೀನ್ ಖಾನ್ ನಿಗೆ ನಿಡಿ-77 ರ ಪ್ರಕಾರ ದಾವಾಸ್ವಿಯಲ್ಲಿ ಯಾವುದೇ ಹಕ್ಕು ಇಲ್ಲದ್ದರಿಂದ, ನಿಮಗೆ ವಿಲ್ ಮಾಡುವ ಯಾವುದೇ ಪ್ರಶ್ನೇನೇ ಬರುವುದಿಲ್ಲ ಎಂದರೆ ಸಾಕ್ಷಿಯು ಯಾಸೀನ್ ಖಾನ್ ಮಾತ್ರ ವಿಲ್ ಮಾಡಿದರು ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ವಿಲ್ ಮಾಡಿದ ಪ್ರಕಾರ ನಿಮಗೆ ದಾವಾಸ್ವಿಯಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸಾಕ್ಷಿಯು 1957 ರಲ್ಲಿ ನನಗೆ ವಿಲ್ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

2) ನಿಡಿ-9 ಖೊಟ್ಟಿಯಾಗಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸರಿಯಾಗಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-9 ರಲ್ಲಿ ಮೃತ್ಯು ಪತ್ರವನ್ನು ರದ್ದು ಮಾಡಿಲ್ಲ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಬರೆದಿಲ್ಲ ಎಂದು ಉತ್ತರಿಸುತ್ತಾರೆ. ಹುಸೇನಬಿ ಗೆ ಖಾತುನಬೀ ಎಂಬ ಮಗಳು ಇದ್ದುದರಿಂದ ನಿಡಿ-9 ಅನ್ನು ಮಾಡುವ ಪ್ರಶ್ನೇನೇ ಬರುವುದಿಲ್ಲ ಎಂದರೆ ಸಾಕ್ಷಿಯು ನಿಜವಾಗಿ ಸಬ್ ರಜಿಸ್ಟ್ರಾರ್ ಕಛೇರಿಯಲ್ಲಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-9 ಅನ್ನು ಯಾರ ಸಮಕ್ಷಮ ಮಾಡಿದ್ದಾರೆ ಎಂದರೆ ಸಾಕ್ಷಿಯು ಕುಲಕರ್ಣಿ

ತಲಾಟಿಯವರ ಸಮಕ್ಷಮ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಅವರು ಯಾರು ಎಂದರೆ ಸಾಕ್ಷಿಯು ಕುಲಕರ್ಣಿ ಎಂದು ಉತ್ತರಿಸುತ್ತಾರೆ. ಅವರು ಜೀವಂತ ಇದ್ದಾರಾ ಎಂದರೆ ಸಾಕ್ಷಿಯು ತೀರಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-9 ರ ಪ್ರಕಾರ ಯಾರ್ಯಾರಿಗೆ ಆಸ್ತಿಯನ್ನು ಕೊಟ್ಟಿದ್ದಾರೆ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಯಾಸೀನ್ ಖಾನ್ ನಿಗೆ ಮಾತ್ರ ಎಂದು ಉತ್ತರಿಸುತ್ತಾರೆ. ನಿಡಿ-77 ಮೃತ್ಯು ಪತ್ರದ ಪ್ರಕಾರ ಕೊಟ್ಟಿದ್ದರಿಂದ ನಿಡಿ-9 ಅನ್ನು ಮಾಡುವ ಪ್ರಮೆಯ ಯಾವ ಕಾರಣಕ್ಕೆ ಬಂತು ಎಂದರೆ ಸಾಕ್ಷಿಯು ಖಾತುನಬಿ ಮಗಳು ಅಲ್ಲ ಎಂದು ಡಿ.ಸಿ. ಯವರು ಕ್ಯಾನ್ಸಲ್ ಮಾಡಿದರು, ಯಾಸೀನ್ ಖಾನ್ ಅಕ್ಕನ ಮಗ ಎಂದು ಸಂಪೂರ್ಣ ಆಸ್ತಿಯನ್ನು ಆತನ ಹೆಸರಿಗೆ ಮಾಡಿದರು ಎಂದು ಉತ್ತರಿಸುತ್ತಾರೆ. ಅದು ಎಲ್ಲಿ ರದ್ದು ಮಾಡಿದ್ದಾರೆ ಎಂದರೆ ಸಾಕ್ಷಿಯು ಸಬ್ ರಜಿಸ್ಟ್ರಾರ್ ಕಛೇರಿ, ಬಾಗೇವಾಡಿಯಲ್ಲಿ ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದ ವಿಷಯವನ್ನು ರದ್ದತಿ ಪತ್ರದಲ್ಲಿ ಬರೆದಿದ್ದಾರೋ ಇಲ್ಲವೋ ಎಂದರೆ ಸಾಕ್ಷಿಯು ಡ. ದಲ್ಲಿ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ರದ್ದತಿ ಪತ್ರವನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಹಾಜರು ಮಾಡಿಲ್ಲ, ಡ. ಹಾಜರು ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಖಾತುನಬಿ ಹುಸೇನಬಿಯ ಮಗಳು ಅಲ್ಲ, ಯಾಸೀನ್ ಖಾನ್ ನ ಅಕ್ಕನ ಮಗ ಎಂದು ಆಸ್ತಿಯನ್ನು ಆತನ ಹೆಸರಿಗೆ

ಮಾಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹುಸೇನಬಿ ವಿಲ್ ಪ್ರಕಾರ ಆಗಲೀ, ಅಥವಾ ನಿಡಿ-9 ರ ಪ್ರಕಾರ ಆಗಲೀ, ಯಾಸೀನ್ ಖಾನ್ ನಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸಾಕ್ಷಿಯು ದಾಖಲಾತಿ ಪ್ರಕಾರ ಬರುತ್ತದೆ ಎಂದು ಉತ್ತರಿಸುತ್ತಾರೆ.

3) ಯಾಸೀನ್ ಖಾನ್ ನಿಗೆ ದಾವಾಸ್ತಿಯ ಬಗ್ಗೆ ನಿಮಗೆ ಮೃತ್ಯು ಪತ್ರವನ್ನು ಮಾಡುವ ಪ್ರಮೇಯ ಬರುವುದಿಲ್ಲ ಎಂದರೆ ಸಾಕ್ಷಿಯು ದಾಖಲಾತಿ ಪ್ರಕಾರ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಡ. ಗಳು ಸೃಷ್ಟಿ ಮಾಡಿದ್ದಾರೆ ಎಂದರೆ ಸಾಕ್ಷಿಯು 80 ವರ್ಷಗಳ ಹಿಂದೆ ನಿಜವಾಗಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಡ. ದೃಡೀಕರಣ ಮಾಡಿದ್ದರಿಂದ, ನಿಮಗಾಗಲೀ, ನಿಮ್ಮ ತಂದೇಗಾಗಲೀ, ಯಾಸೀನ್ ಖಾನ್ ನಿಗಾಗಲೀ ದಾವಾದ ಆಸ್ತಿಯ ಬಗ್ಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸಾಕ್ಷಿಯು ಬರುತ್ತದೆ ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ತನಗೆ ಮೃತ್ಯು ಪತ್ರ ಮಾಡಿದ ದಿನಾಂಕದಿಂದ ದಾವಾದ ಆಸ್ತಿಯ ಕಬ್ಜೆಯಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಯರು ಹುಸೇನಬಿ ಮಗಳಾದ ಖಾತುನಬಿಯ ನೇರ ವಾರಸುದಾರರಾಗಿದ್ದರಿಂದ ದಾವಾಸ್ತಿಗೆ ಸಂಬಂಧ ಇದೆ ಎಂದರೆ ಸಾಕ್ಷಿಯು 80 ವರ್ಷಗಳಿಂದ ನಾವೇ ವಾರಸುದಾರರು

ಆಗಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು, ಯಾಸೀನ್ ಖಾನ್, ಸೇರಿ ದಾವಾಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಒಂದರ ಮೇಲೆ ಒಂದು ವಿಲ್ ಗಳನ್ನು ಮತ್ತು ಡ.ಗಳನ್ನು ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮೃತ್ಯು ಪತ್ರಗಳನ್ನು ಮತ್ತು ಡ. ಗಳನ್ನು ಹುಸೇನಬಿ, ಖಾತುನಬಿ ಮತ್ತು ಅವರ ವಾರಸುದಾರರ ಗಮನಕ್ಕೆ ತರಲಾರದೇ ಖೊಟ್ಟಿಯಾಗಿ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**7 ಮತ್ತು 9 ನೇ ಪ್ರತಿವಾದಿಯರು ಗೈರು ಹಾಜರಿದ್ದ ಕಾರಣ, ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.